# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 23.12.2010**

ಪಾಲಿಕೆ ಆಯುಕ್ತರು ಇಂದು ಚೌಡಯ್ಯ ರಸ್ತೆ ತಪಾಸಣೆ ಕೈಗೊಂಡು ಬಸವೇಶ್ವರ ರಸ್ತೆಯಿಂದ ರಾಜಭವನದವರೆಗೆ 631 ಮೀಟರ್‌ನಷ್ಟು ಉದ್ದದ ರಸ್ತೆಯನ್ನು ಈಗಿರುವ ರಸ್ತೆಗಿಂತ 5 ಮೀಟರ್‌ನಷ್ಟು ಹೆಚ್ಚಿಗೆ ರಸ್ತೆ ಅಗಲೀಕರಣಗೊಳಿಸಿ ದ್ವಿಮುಖ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಈ ಹಿಂದೆ ಅನುಮೋದನೆ ದೊರಕಿದ್ದು, ಕೂಡಲೇ ಕಾಮಗಾರಿ ಪ್ರಾರಂಭಿಸಲು ಬೃಹತ್ ರಸ್ತೆ ಅಧೀಕ್ಷಕ ಅಭಿಯಂತರರಿಗೆ ಸೂಚಿಸಿದರು.

ರಸ್ತೆ ಅಗಲೀಕರಣಕ್ಕಾಗಿ ಅವಶ್ಯಕ ಸ್ಥಳವನ್ನು ಸ್ವಾಧೀನಪಡಿಸಿಕೊಂಡು ಇಂದಿರಾಗಾಂಧಿ ಮ್ಯೂಸಿಕಲ್ ಫೌಂಟೇನ್ ಉದ್ಯಾನದ ಚೌಡಯ್ಯ ರಸ್ತೆ ಕಡೆಗೆ ಕಾಂಪೌಂಡ್ ಗೋಡೆ ನಿರ್ಮಿಸುವ ಬದಲು ornamental grill ಅಳವಡಿಸಿ ಉದ್ಯಾನವನದ ಸೌಂದರ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಇಂದಿರಾಗಾಂಧಿ ಮ್ಯೂಸಿಕಲ್ ಫೌಂಟೇನ್ ಕಡೆಯಿಂದ ನೆಹರು ಪ್ಲಾನೆಟೇರಿಯಂ ಕಡೆಗೆ ಹೋಗುವ ಜನರಿಗೆ ರಸ್ತೆ ದಾಟಲು ಅನುಕೂಲವಾಗಲು ಮೇಲು ಸೇತುವೆ (sky walk) ನಿರ್ಮಿಸಲು ಮತ್ತು ಅದರ ಸಾಧಕ-ಬಾಧಕಗಳನ್ನು ಅಭ್ಯಾಸಿಸಿ auction ಮಾಡುವುದರ ಮುಖಾಂತರ sky walk ನಿರ್ಮಿಸಲು ಉಪ ಆಯುಕ್ತರು (ಜಾಹೀರಾತು) ರವರಿಗೆ ಸೂಚಿಸಿದರು.

ವಿಧಾನಸೌಧ, ಹೈಕೋರ್ಟ್, ಶಾಸಕರ ಭವನ, ರಾಜಭವನ, ಆಕಾಶವಾಣಿ, ಪ್ಲಾನೆಟೇರಿಯಂ, ಮ್ಯೂಸಿಕಲ್ ಫೌಂಟೇನ್ ಮತ್ತು war memorial ಉದ್ಯಾನವನಕ್ಕೆ ಭೇಟಿ ನೀಡುವರ ವಾಹನಗಳನ್ನು ನಿಲ್ಲಿಸಲು ಅನುಕೂಲವಾಗುವ ದೃಷ್ಟಿಯಿಂದ ಇಂದಿರಾಗಾಂಧಿ ಮ್ಯೂಸಿಕಲ್ ಉದ್ಯಾನವನದಲ್ಲಿ basement car parking ನಿರ್ಮಿಸುವ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ತಕ್ಷಣವೇ ಸಂಬಂಧಪಟ್ಟ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ, ಕಾಮಗಾರಿ ಪ್ರಾರಂಭಿಸಲು ಆದೇಶಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 23.12.2010**

## *ಉಪ ಮಹಾಪೌರರವರಿಂದ ಚೆಕ್ ವಿತರಣೆ*

ಇತ್ತೀಚೆಗೆ ಕಾಡುಮರ ಬಿದ್ದು ಗಾಯಗೊಂಡಿರುವ ಪರಿಣಾಮ ವಿಜಯನಗರದ ಶರಾವತಿ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶ್ರೀ ಸತ್ಯಪ್ರಕಾಶ್ (42 ವರ್ಷ) ರವರಿಗೆ ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 3.83 ಲಕ್ಷ ರೂ.ಗಳ ವೈದ್ಯಕೀಯ ಪರಿಹಾರ ಚೆಕ್‌ನ್ನು ಉಪ ಮಹಾಪೌರರಾದ ಶ್ರೀ ಎನ್.ದಯಾನಂದ್ ರವರು ವಾರ್ಡ್-133ರ ಹಂಪಿನಗರ ಪಾಲಿಕೆ ಸದಸ್ಯರಾದ ಶ್ರೀ ಆರ್. ಚಂದ್ರಶೇಖರಯ್ಯ ರವರೊಂದಿಗೆ ವಿತರಿಸಿ ಬೇಗ ಗುಣಮುಖರಾಗಲೆಂದು ಹಾರೈಸಿದರು.

ಒಂದು ತಿಂಗಳ ಹಿಂದೆ ಶ್ರೀ ಸತ್ಯಪ್ರಕಾಶ್ ರವರು ಹಂಪಿನಗರದ 11ನೇ ಅಡ್ಡರಸ್ತೆಯಲ್ಲಿ ವಾಹನದಲ್ಲಿ ಚಲಿಸುತ್ತಿದ್ದಾಗ, ಸ್ವಾಭಾವಿಕವಾಗಿ ಇವರ ಮೇಲೆ ಕಾಡುಮರ ಬಿದ್ದಿರುವುದರಿಂದ ತೀವ್ರವಾಗಿ ಗಾಯಗೊಂಡು ವಿಜಯನಗರದ ಶರಾವತಿ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸದರಿಯವರು ವಿಜಯನಗರದ ಸುಬ್ಬಣ್ಣ ಗಾರ್ಡನ್‌ನ ನಿವಾಸಿಯಾಗಿದ್ದಾರೆ.

ಪಾಲಿಕೆಯಿಂದ ನೀಡಿರುವ ಇಲ್ಲಿಯವರೆಗಿನ ವೈದ್ಯಕೀಯ ಪರಿಹಾರ ವೆಚ್ಚಕ್ಕಿಂತ ಇವರಿಗೆ ನೀಡಿರುವ 3.83 ಲಕ್ಷ ರೂ.ಗಳ ಮೊತ್ತವು ದೊಡ್ಡಮೊತ್ತವಾಗಿರುತ್ತದೆ.

ಈ ಸಂದರ್ಭದಲ್ಲಿ ಪಾಲಿಕೆಯ ಅಧಿಕಾರಿಗಳು ಹಾಗೂ ಆಸ್ಪತ್ರೆಯ ವೈದ್ಯರು ಮತ್ತು ಗಾಯಾಳುರವರ ತಾಯಿಯವರು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**